Reg No B G 155 ಶ್ರೀ 24- 1 – 1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16–00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೇಂದ್ರಕ್ಕೆ ಶಂಕರೇ ಗೌಡರ ಎಚ್ಚರಿಕೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಪುನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ನಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗಸೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಮಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'

ಚಾಮರಾಜಪುರಂ, ಮೈಸೂರು 4.

ತಿದ್ದುಪಡಿ

ನಿನ್ನೆ ಸತ್ಯವಾದಿಯಲ್ಲಿ ಮೈಸೂರು ಪುರಸಭೆಯ ಸುದ್ದಿ ಪ್ರಕಟವಾಗಿರುವುದರಲ್ಲಿ ಉಪಾಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿ ಶ್ರೀ ಹೊಟ್ಟಪ್ಪನವರು ಎಂದು ತಪ್ಪಾಗಿ ಬಿದ್ದಿದೆ. ಅದನ್ನು ಶ್ರೀ ಎಂ. ಕೆ. ರಾಮಕೃಷ್ಣರವರು ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಪ್ರಾಂತೀಯ ಭಾವನೆಯಿಂದ ಕೇಂದ್ರ ಮೈಸೂರು ಮತ್ತು ಮಹಾರಾಷ್ಟ್ರದಂತಹ ಮುಖ್ಯನಾದ ಅಂತರರಾಜ್ಯ ವಿಚಾರದಲ್ಲಿ ನಿರ್ಧಾರ ತೆಗೆದುಕೊಂಡರೆ ಅದು ದೇಶದ ಸಂಘಟನೆಗೆ ಭಂಗ ತರುವುದೆಂದು ವಿಧಾನ ಪರಿಷತ್ತಿನಲ್ಲಿ ವಿದ್ಯಾ ಮಂತ್ರಿ ಶ್ರೀ ಶಂಕರೆ ಗೌಡರು ಹೇಳಿದರು.

★

ಬೆಂಗಳೂರು— ನಾಲ್ಕನೇ ಯೋಜನೆಯಲ್ಲಿ ರಾಜ್ಯದ 3000 ಗ್ರಾಮಗಳಿಗೆ ವಿದ್ಯುದ್ದೀಪ ಹಾಕಲು ಕೇಂದ್ರ ಸರಕಾರ ಮತ್ತು ಎಲ್ ಐ ಸಿ ನೆರವನ್ನು ಸರಕಾರ ಕೋರಿದೆ.

○

ಪ್ರತಿಬಂಧಕ

ಹುಬ್ಬಳ್ಳಿಯಲ್ಲಿ ಆದ ಘರ್ಷಣೆ ಸಂಬಂಧದಲ್ಲಿ ಮುಂಜಾಗ್ರತೆ ಕ್ರಮವಾಗಿ ಬೆಳಗಾಂನಲ್ಲಿ ಒಂದು ವಾರ ಪ್ರತಿಬಂಧಕ ಜಾರಿಯಾಗಿದೆ.

★

ಬಂಧನ

ಪಾಕೀಸ್ತಾನದಲ್ಲಿ ವಾಸಿಸುತ್ತಿದ್ದ 6 ಹಿಂದೂ ಸಂಸಾರಗಳು ರಾಮಘರ ಭಾಗದಲ್ಲಿ ಭಾರತಕ್ಕೆ ಪ್ರವೇಶಿಸಲು ಬಂದಾಗ ಬಂಧಿತರಾದರು. ಪಾಕಿಸ್ತಾನದಲ್ಲಿ ಜೀವಿತ ಗುಲಾಮರಿಗಿಂತ ಕಷ್ಟವಾಗಿರುವದೆಂದೂ ತಮ್ಮನ್ನು ಪಾಕೀಸ್ತಾನಕ್ಕೆ ನೂಕಬಾರದೆಂದೂ ಪೋಲೀಸರಲ್ಲಿ ಮೊರೆಯಿಟ್ಟರು.

●

ಪೌರಸಭೆ

ಮೈಸೂರು ಪೌರಸಭೆಯ ಈ ಮಾಹೆ ಸಾಧಾರಣ ಪುರಸಭಾಧಿವೇಶನವು 31 ನೇ ತಾ|| ನಡೆಯುವುದು

ಅಡ್ಡೆ ಹೇಳಿಕೆ

ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ|| ಆಡ್ಡೆಯವರು ಧಾರ್ವಾಡದಲ್ಲಿ ಭಾಷಣ ಮಾಡುತ್ತಾ, ಸಂಸ್ಕೃತವನ್ನು ಇಂಗ್ಲೀಷ್ ಮತ್ತಿತರ ಭಾಷೆಗಳೊಡನೆ ಸಹ ವ್ಯಾಸಂಗ ಮಾಡಬೇಕೆಂದೂ, ಸಂಸ್ಕೃತವು ಎಲ್ಲ ಭಾಷೆಗಳಿಗೂ ತಾಯಿ ಭಾಷೆಯಂತೆ ಕಂಡುಬರುತ್ತಿದೆಯೆಂದು ತಿಳಿಸಿದರು.

★

ರಿಟ್ ವಜ

1968 ರ ಅಧಿಕೃತ ಭಾಷಾ ಶಾಸನದ ವಿರುದ್ಧ ಸೇಟ್ ಗೋವಿಂದ ದಾಸರು ಹಾಕಿದ್ದ ರಿಟ್ ಅರ್ಜಿಯನ್ನು ದೆಹಲಿ ನ್ಯಾಯಾಲಯ ತಳ್ಳಿ ಹಾಕಿದೆ.

○

ಎಮ್ಮೆ ಜೂಜು

ಸೂರತ್ಕಲ್‌ನಲ್ಲಿ ವ್ಯವಸ್ಥೆ ಮಾಡಿದ್ದ ರೋಮಾಂಚಕಾರಿ ಎಮ್ಮೆ ಜೂಜನ್ನು ಗವರ್ನರರು ವೀಕ್ಷಿಸಿದರು 23 ಜೋಡಿ ಎಮ್ಮೆಗಳು ಅದರಲ್ಲಿ ಭಾಗವಹಿಸಿದ್ದವು. ಈ ಕ್ರೀಡೆಯನ್ನು ಅವರು ಮೆಚ್ಚಿದರು.

★

ಗುಲ್ಬರ್ಗ— ರಾಜ್ಯಮಟ್ಟದ 'ಮೈಸೂರು ಮುನ್ನಡೆ" ಪುಸ್ತಕ ಪ್ರದರ್ಶನವನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಫೆಬ್ರವರಿ 1 ರಂದು ಉದ್ಘಾಟಿಸುವರು.

ಮದರಾಸು—ಈ ವರ್ಷದ ಎಲ್ ಐ ಸಿ ಬಂಡವಾಳದ ಹಣ ರೂ. 150 ಕೋಟಿಯಲ್ಲಿ, ರೂ. 45 ಕೋಟಿ ಗ್ರಾಮಾಂತರಗಳ ವಿದ್ಯುದ್ದೀಪ, ವಸತಿ ಸೌಕರ್ಯ, ಭೂ ಅಡಮಾನ ಬ್ಯಾಂಕುಗಳ ಮೂಲ್ಧ ವ್ಯವಸಾಯ ಉತ್ಪಾದನೆಗೆ ಉಪಯೋಗಿಸಲಾಗುವದೆಂದು ಎಲ್ ಐ ಸಿ ಕಾರ್ಪೊರೇಷನ್ ಕಾರ್ಪೊರೇಷನ್ ಅಧ್ಯಕ್ಷ ಶ್ರೀ ಭಿಡೇಯರು ಹೇಳಿದರು.

ಶಿವಸೇನೆ ಆರ್ಭಟ

ಪೂನಾ— ಬೆಳಗಾಂ ಮತ್ತು ಇತರ ಮರಾಟಿ ಮಾತನಾಡುವವರ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಭಾವನೆ ಹೆಚ್ಚುತ್ತಿದ್ದು, ಈ ಕಾರ್ಯ ಸಫಲಿಸಲು ಪರಿಣಾಮಕಾರಿ ಕಾರ್ಯ ಕೈಗೊಳ್ಳಲಾಗುವುದೆಂದು ಶಿವಸೇನಾ ಅಧ್ಯಕ್ಷ ಶ್ರೀ ಬಾಲ್ ಥ್ಯಾಕರೆ ಹೇಳಿದರು. ತಾ 26 ರ ನಂತರ ಬೊಂಬಾಯಿಗೆ ಪ್ರಧಾನಿಯವರು, ಕೇಂದ್ರ ಮಂತ್ರಿಮಂಡಲದ ಉನ್ನತ ಸದಸ್ಯರು, ಮೈಸೂರು ಮುಖ್ಯ ಮಂತ್ರಿಯವರು, ಕಾಂಗ್ರೆಸ್ ಅಧ್ಯಕ್ಷರು ಬರುವದನ್ನು ಅಡ್ಡಿಪಡಿಸಲಾಗುವುದೆಂದು ಪ್ರಧಾನಿಯವರಿಗೆ ಬರೆದಿರುವದಾಗಿ ತಿಳಿಸಿರುವರು. ಅವರು ಬಂದರೆ ಶಿವಸೇನಾ ಸ್ವಯಂಸೇವಕರು ಅವರ ಕಾರುಗಳ ಮುಂದೆ ಮಾರ್ಗದಲ್ಲೆಲ್ಲಾ ಮಲಗುವದಾಗಿ ಹೇಳಿರುವರು.

★

ಹುಡುಗನ ಆಶೆ !

ಕೇಂಬ್ರಿಡ್ಜ್— ಅಗ್ನಿಶಾಮಕ ದಳದ ಕಾರ್ಯವನ್ನು ನೋಡಬೇಕೆಂಬ ಆಶೆಯಿಂದ, 6 ವರ್ಷದ ಆಂಡ್ರೂ ತನ್ನ ಮನೆಯ ಮುಂದಿನ ತೆರೆಗಳಿಗೆ ಬೆಂಕಿಕಡ್ಡಿ ಗೀಚಿ ಹತ್ತಿಸಿದೆ ; ಜ್ವಾಲೆ ಹೆಚ್ಚಾಯಿತು ; ಅಗ್ನಿಶಾಮಕ ದಳದವರು ಬಂದು ಆರಿಸಿದರು : ಹುಡುಗ ತಾಯಿಯ ಹತ್ತಿರ ನಿಂತು ನೋಡುತ್ತಿದ್ದ.

ರಿಪಬ್ಲಿಕ್ ಡೇ

ಮೈಸೂರು— ರಿಪಬ್ಲಿಕ್ ಡೇ ಸಮಾರಂಭಗಳು ಸರ್ಕಾರಿ ಭವನದ ಹತ್ತಿರವೆ ಪೋಲೀಸು ಪೆರೇಡು ಸ್ಥಳದಲ್ಲೂ, ಸಾಂಸ್ಕೃತೀಯ ಕಾರ್ಯಕ್ರಮಗಳು ಟೌನ್‌ಹಾಲ್ ಮೈದಾನದಲ್ಲೂ ನಡೆಯುವದು.

★ ಬೆಂಗಳೂರು— ರಾಜ್ಯಾದ್ಯಂತ ನಿನ್ನೆ ಬರಿನಲ್ಲಿ ನಡೆದ ತಾಲ್ಲೂಕು ಬೋರ್ಡು ಚುನಾವಣೆಯಲ್ಲಿ 171 ಬೋರ್ಡುಗಳಲ್ಲಿ 141ನ್ನು ಕಾಂಗ್ರೆಸ್ಸು ವಶಪಡಿಸಿಕೆದಂಡಿ

ಶ್ರೀ ಗಣಪತಿ ಪ್ರತಿಷ್ಠಾ ಮಹೋತ್ಸವ

ಚಾಮರಾಜನಗರದ ತಾಲ್ಲೂಕು ಹೊಂಗನೂರು ಗದ್ದೆಬೈಲಿನಲ್ಲಿ ಪುರಾತನ ಕಾಲದ ಒಂದು ಗಣಪತಿ ವಿಗ್ರಹವು ದೊರೆಕಿದ್ದು, ತಿಮ್ಮರಾಯನಾಯಕರ ಮುಕ್ಕಳು ಶ್ರೀ ಸಿದ್ಧನಾಯ್ಕರು ನೂತನ ದೇವಾಲಯವನ್ನು ಕಟ್ಟಿಸಿ ದಿನಾಂಕ 16-1-69 ನೇ ಗುರುವಾರ ಶ್ರೀ ಗಣಪತಿ ಪ್ರತಿಷ್ಠಾ ಮಹೋತ್ಸವವು ನಡೆಯಿತು.

ತಾಲ್ಲೂಕು ಬೋರ್ಡು ಅಧ್ಯಕ್ಷರಾದ ಶ್ರೀ ವೆಂಕಟರಂಗನಾಯ್ಕರು ತಾ ॥ ಬೋರ್ಡು ಸದಸ್ಯರಾದ ಶ್ರೀ ಎ. ವೆಂಕಟರಂಗಯ್ಯನವರು, ರೆವಿನ್ಯೂ ಇನ್ಸ್ಪೆಕ್ಟರ್ ರವರು, ತಾಲ್ಲೂಕು ಆಯುರ್ವೃದ್ಧಿ ಅಧಿಕಾರಿಗಳು ಮತ್ತು ನೂರಾರು ಜನ ಗ್ರಾಮಸ್ಥರು ಮಹಾಮಂಗಳಾರತಿಗೆ ಆಗಮಿಸಿದ್ದರು. ಶ್ರೀ ಹೆಚ್. ವರದರಾಜಯ್ಯಂಗಾರ್ಯರು ಮತ್ತು ಶ್ರೀ ಆನಂತನರಸಿಂಹಯ್ಯಂಗಾರ್ಯರು ಪ್ರತಿಷ್ಠಾ ಕಾರ್ಯಗಳನ್ನು ನಡೆಸಿದರು.



Help The Gorakshana

S H A K T I
S U D H A

A Superb Tonic

ಅಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳನ್ನು ಸಿಹಿಯು ಕಹಿ

Quality Printi g — Neat Binding
Lakshminarasimha Press
Sivarampet, Mysore

Cow laughter should be banned Immediately

ಪುಡ್‌ಲಾಂಡ್ಸ್ ಜಯಪ್ರದ 2ನೇ ವಾರ
.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....
ಆ ಮ್ನೆ ನಾ ಮ್ನೆ
ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ
ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ
[ದಿನ 3 ಪ್ರದರ್ಶನಗಳು]

ಆಪೆರಾ 24-1-69 ರಿಂದ
— ಅತ್ಯಮೋಘ ತಮಿಳು ಚಿತ್ರ —
ಒ ಳ ವಿ ಳ ಕ್ಕು
ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ
.... ದಿನವಹಿ 3ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmapracharo Nirate M S Krishna Rao (Proprietor) at the Satyavadi Press Chamarajapuram, Mysoe 4